
# ಭೋಜಪುರದ ಭೋಜೇಶ್ವರ

**ಈ ಶಿವಾಲಯಕ್ಕೆ ಪೂರ್ವದ ಸೋಮನಾಥ ಎಂದೂ ಹೆಸರಿದೆ. ಮಂದಿರದಲ್ಲಿ ಚೌಕಾಕಾರದ ಸದೃಢವಾಗಿರುವ ಕಲ್ಲಿನ ಸ್ತಂಭದ ಮೇಲೆ ಶಿವಲಿಂಗವನ್ನು ನಿರ್ಮಿಸಲಾಗಿದೆ. ಸುಮಾರು ಏಳೂವರೆ ಅಡಿ ಎತ್ತರವಿರುವ ಈ ಶಿವಲಿಂಗದ ಸುತ್ತಳತೆ ಹದಿನೆಂಟು ಅಡಿ.**

■ ಚಿತ್ರ– ಲೇಖನ: **ಜಯಶ್ರೀ ಕಾಲ್ಕುಂದ್ರಿ**



ಒಂದು ಶಿಲ್ಪಕಲಾಕೃತಿ







ಮಧ್ಯಪ್ರದೇಶದ ರಾಜಧಾನಿ, ಭೋಪಾಲದಿಂದ ಇಪ್ಪತ್ತೆಂಟು ಕಿಮೀ ದೂರದಲ್ಲಿರುವ ಭೋಜಪುರದಲ್ಲಿ ಭೋಜೇಶ್ವರ ದೇವಾಲಯವಿದೆ. ಹನ್ನೊಂದನೆಯ ಶತಮಾನದಲ್ಲಿ ಧಾರ್ ಪ್ರಾಂತ್ಯದ ಮಹಾರಾಜಾ ಭೋಜ ಇದನ್ನು ನಿರ್ಮಿಸಿದ್ದರಿಂದ ಭೋಜೇಶ್ವರ ದೇವಾಲಯವೆಂದೇ ಇದು ಹೆಸರುವಾಸಿ.

ರಾಜಾ ಭೋಜಪಾಲ ದಕ್ಷ, ಸಮರ್ಥ ಹಾಗೂ ನ್ಯಾಯ ಪರಿಪಾಲಕನಾಗಿ ಆಡಳಿತ ನಡೆಸಿ, ಪ್ರಜಾಪ್ರೇಮಿಯೆಂದು ಹೆಸರಾಗಿದ್ದ. ಶಿವಾಲಯ ಮಾತ್ರವಲ್ಲ, ಜೈನ ಬಸದಿಗಳನ್ನು ನಿರ್ಮಿಸಿ, ಸರ್ವಧರ್ಮ ಸಮನ್ವಯತೆ ಮೆರೆದಿದ್ದ. ರಾಜ್ಯದ ರಾಜಧಾನಿಯನ್ನೂ ಆತನ ಹೆಸರಿನಿಂದಲೇ ಭೋಪಾಲ (ಭೋಜಪಾಲ್) ಎಂದು ಗುರುತಿಸಲಾಗುತ್ತಿದೆ. ಭೋಜೇಶ್ವರ ದೇವಾಲಯ ಪುರಾತತ್ವ ಇಲಾಖೆಯ ಸಂರಕ್ಷಣೆಗೆ ಒಳಪಟ್ಟಿದೆ. ಭೋಜಪುರ್ ಶಿವಾಲಯದಲ್ಲಿ ಇಪ್ಪತ್ತೆರಡು ಅಡಿ ಎತ್ತರದ ಏಕಶಿಲೆಯ ಶಿವಲಿಂಗವಿದೆ. ಸುಮಾರು ಎಪ್ಪತ್ತು ಟನ್ ತೂಗುವ ಈ ಶಿವಲಿಂಗ, ಅತ್ಯದ್ಭುತ ಶಿಲ್ಪಕಲೆಯಿಂದಾಗಿ ಗಮನ ಸೆಳೆಯುತ್ತದೆ.

ಈ ಶಿವಾಲಯಕ್ಕೆ ಪೂರ್ವದ ಸೋಮನಾಥ ಎಂದೂ ಹೆಸರಿದೆ. ಮಂದಿರದಲ್ಲಿ ಚೌಕಾಕಾರದ ಸದೃಢವಾಗಿರುವ ಕಲ್ಲಿನ ಸ್ತಂಭದ ಮೇಲೆ ಶಿವಲಿಂಗವನ್ನು ನಿರ್ಮಿಸಲಾಗಿದೆ. ಸುಮಾರು ಏಳೂವರೆ ಅಡಿ ಎತ್ತರವಿರುವ ಈ ಶಿವಲಿಂಗದ ಸುತ್ತಳತೆ ಹದಿನೆಂಟು ಅಡಿ. ಶಿವಲಿಂಗದ ಸುತ್ತಲೂ ನಾಲ್ಕು ಬೃಹತ್ ಸ್ತಂಭಗಳಿವೆ. ಮುಖದ್ವಾರದಲ್ಲಿ ಶಿಲಾಬಾಲಿಕೆಯರ ಕೆತ್ತನೆಗಳಿದ್ದರೆ, ಮುಖದ್ವಾರದ ಎರಡೂ ಮಗ್ಗಲಿಗೆ ಬಾಯ್ತೆರೆದು ನಿಂತಿರುವ ಮೀನುಗಳ ಕೆತ್ತನೆಗಳಿವೆ.

ಮಳೆ ಗಾಳಿಯ ಹೊಡೆತಕ್ಕೆ ಸಿಲುಕಿ, ದೇವಾಲಯದ ಚಾವಣಿ ಶಿಥಿಲವಾಗಿರುವ ಕಾರಣ ಭಕ್ತಾದಿಗಳಿಗೆ ಮೊದಲಿನಂತೆ ಏಣಿಯನ್ನೇರಿ ಅಭಿಷೇಕ ಮಾಡುವ ಸೌಲಭ್ಯವಿಲ್ಲ. ಬೃಹತ್ ಶಿವಲಿಂಗದ ಎದುರಿಗೆ ಚಿಕ್ಕದಾಗಿ ನಿರ್ಮಿಸಿದ ಶಿವಾಲಯದಲ್ಲಿ ಪೂಜೆ, ನೈವೇದ್ಯಗಳನ್ನು ಸಲ್ಲಿಸಬಹುದು. ದೇವಾಲಯದ ಕೆಲಸವೂ ಅಪೂರ್ಣವಾಗಿರುವ ಕಾರಣ ಹಲವಾರು ಕೆತ್ತನೆಗಳು, ಕಲ್ಲುಗಳು ಹಾಗೆಯೇ ಉಳಿದಂತಿವೆ. 'ಮಂದಿರದ ಬಲಭಾಗದಲ್ಲಿ, ಮಣ್ಣಿನಲ್ಲಿ ಹುಗಿದಿರಿಸಿದ